## ಹೀಗೊಂದು ಬಿದಿರಿನ ಕತೆ

ಬಿದರಹಳ್ಳಿ ಇದೊಂದು ಐತಿಹಾಸಿಕ ಗ್ರಾಮ. ಇದಕ್ಕೆ ಮೊದಲು 'ವೇಣುಪುರಿ' ಅಂತಲೂ ಕರೆಯುತ್ತಿದ್ದರಂತೆ. ನಂತರ ತುಂಗಭದ್ರಾ ನದಿ ತೀರದ ದಂಡೆಯಲ್ಲಿ ಬಿದಿರಿನಲ್ಲಿ ರೇಣುಕಾದೇವಿ ಮೂರ್ತಿ ದೊರಕಿತಂತೆ, ಅನಂತರ 'ಬಿದರಹಳ್ಳಿ ಅಮ್ಮ' ಎಂಬ ದೊಡ್ಡ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ಅಂದಿನಿಂದ ಈ ಊರಿಗೆ ಬಿದರಹಳ್ಳಿ ಅಂತ ಹೆಸರು ರೂಢಿಗೆ ಬಂದಿದೆ.

ಸದ್ಯ ಈ ಊರು ಬಿದಿರಿಗೆ ಖ್ಯಾತಿ ಪಡೆದಿದೆ. ಈ ಊರ ರೈತರ ಜಮೀನನ್ನು ಹದಿನೈದು ವರ್ಷ ಲೀಸ್ ತೆಗೆದುಕೊಂಡು ಗದುಗಿನ ಮಹೇಶ ಗೌಡ ಎಂಬುವವರು 45 ಹೆಕ್ಟೇರ್ ಬಿದಿರನ್ನು ಬೆಳೆದಿದ್ದಾರೆ. ಈ ಬಿದಿರನ್ನು ಕುರಿತು ಅಧ್ಯಯನ ಮಾಡಲು ದೇಶವಿದೇಶಗಳಿಂದ ಸಂಶೋಧಕರು ಬರುತ್ತಿರುವುದು ಅಚ್ಚರಿಯ ಸಂಗತಿ. ಈ ಬಿದರಹಳ್ಳಿ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಪುಟ್ಟ ಹಳ್ಳಿ.

—ಚಂದ್ರಕಾಂತ ಮ. ತಾಳಿಕೋಟಿ





## ಸೋಜಿಗದ ಆಂಥೂರಿಯಂ

ಆಂಥೂರಿಯಂ ತನ್ನ ವಿಶೇಷ ಆಕಾರದಿಂದಲೇ ಗಮನಸೆಳೆಯುವ ಹೂವಿನ ಗಿಡ. ಹೆಚ್ಚು ಬೇಡಿಕೆಯಲ್ಲಿರುವ ಗಿಡಗಳಲ್ಲಿ ಇದು ಒಂದು ಅಪರೂಪದ ಸಸ್ಯ. ಆಂಥೂರಿಯಂ ವಾತಾವರಣದಲ್ಲಿರುವ ವಿಷ ಅನಿಲಗಳಾದ ಅಮೋನಿಯ, ಫಾರ್ಮಾಲ್ಡಿಹೈಡ್, ಟೌಲೀನ್, ಕ್ಸಲೀನ್ ಮತ್ತು ಅಲರ್ಜಿನ್ಸ್‌ಗಳನ್ನು ಹೀರಿ ಪರಿಶುದ್ಧವಾದ ಆಮ್ಲಜನಕವನ್ನು ಪರಿಸರಕ್ಕೆ ನೀಡುತ್ತದೆ. ಈ ಕಾರಣದಿಂದ ಅಮೆರಿಕದ ನಾಸಾ ತನ್ನ ನೈಸರ್ಗಿಕದ ಬಲು ಉಪಯುಕ್ತವಾದ ಸಸಿಗಳ ಪಟ್ಟಿಯಲ್ಲಿ ಆಂಥೂರಿಯಂ ಗಿಡವನ್ನು ಸೇರಿಸಿಕೊಂಡಿದೆ. ಹೆಚ್ಚಾಗಿ ಉಷ್ಣವಲಯದ ವಾತಾವರಣದಲ್ಲಿ ಬೆಳೆಯುವ ಆಂಥೂರಿಯಂ ಹೂವಿನ ಗಿಡ ಸಾಮಾನ್ಯವಾಗಿ ಬಿಳಿ ಅಥವಾ ಕೆಂಪು ಬಣ್ಣದ ಹೂ ಒಂದನ್ನೇ ಬಿಡುತ್ತದೆ. ಈ ಛಾಯಾಚಿತ್ರದಲ್ಲಿ ಕಾಣುವಂತೆ ಒಂದೇ ಬಗೆಯ ಬೇರಿನಿಂದ ಗಿಡದ ಕಾಂಡಗಳು ಕವಲೊಡೆದು ಬಿಳಿ ಮತ್ತು ಕೆಂಪು ಹೂಗಳು ನಮ್ಮ ಮನೆಯಂಗಳದಲ್ಲಿ ಅರಳಿರುವುದು ಸೋಜಿಗವೇ ಸರಿ!

—ವಿಜಯ್‌ಕುಮಾರ್ ಎಚ್. ಕೆ.

## ಸೀಗೆಹುಣ್ಣಿಮೆಗೆ ಎತ್ತಿನ ಪೂಜೆ

ಜಗತ್ತು ಎಷ್ಟೇ ಮುಂದುವರೆದರೂ, ಹೊಸ ಹೊಸ ಯಂತ್ರಗಳು, ಸಲಕರಣೆಗಳು ಬಂದರೂ, ಹಳ್ಳಿಯ ರೈತರ ಕೃಷಿಗೆ ಮಾತ್ರ ಎತ್ತುಗಳೇ ಮೂಲ ಆಧಾರ. ಆ ರೈತಮಿತ್ರರನ್ನು ಪೂಜಿಸಿ ವಂದಿಸುವ ದೊಡ್ಡ ಹಬ್ಬ ಕಾರಹುಣ್ಣಿಮೆ. ಕಾರಹುಣ್ಣಿಮೆಯಂದು ಎತ್ತುಗಳ ಮೈಮೇಲೆ ಬಣ್ಣ ಬಣ್ಣದ ಚಿತ್ತಾರವ ಬಿಡಿಸಿ. ಕೊರಳಲ್ಲಿ ಗಂಟೆ, ಹಾರ ಕಟ್ಟಿ ಅಲಂಕರಿಸಿ ಸಂಭ್ರಮಿಸುತ್ತಾರೆ. ಅದೇ ದೊಡ್ಡ ಹಬ್ಬ,ನಮ್ಮ ಕೃಷಿಕರಿಗೆ.ಹೊಲಗಳಲ್ಲಿ ಬಿತ್ತನೆ ಆರಂಭವಾಗುವ ಈ ಕಾಲದ ಗಣಪತಿ ಪೂಜೆಯ ಹಬ್ಬ ಎಂದು ಕಾರಹುಣ್ಣಿಮೆಯನ್ನು ಹೇಳಬಹುದು.

—ನರಸಿಂಹಾರೆಡ್ಡಿ ಯಂಕಮೊಳ, ಸೇಡಂ

